# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **2208** |
| **ಸದಸ್ಯರ ಹೆಸರು** | : | **ಡಾ।। ಎಂ.ಜಿ.ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **26.03.2026** |
| **ಉತ್ತರಿಸುವ ಸಚಿವರು** | : | **ಮಾನ್ಯ ಉಪ ಮುಖ್ಯಮಂತ್ರಿಗಳು** |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪ್ರಮುಖ ಹಾಗೂ ಮಧ್ಯಮ ನೀರಾವರಿ ಯೋಜನೆಗಳ ವಿವರವೇನು: ಉದಾಹರಣೆಗೆ Karanja Project ಮತ್ತು Chulaki Nala project ಯೋಜನೆಗಳ ಮೂಲಕ ಒಟ್ಟು ಎಷ್ಟು ಟಿ.ಎಂ.ಸಿ. ನೀರು ಸಂಗ್ರಹಿಸಲಾಗುತ್ತಿದೆ; (ಯೋಜನೆವಾರು ವಿವರ ನೀಡುವುದು)</td><td>ಬೀದರ್ ಜಿಲ್ಲೆಯಲ್ಲಿನ ಪ್ರಮುಖ ನೀರಾವರಿ ಯೋಜನೆಗಳು ಮತ್ತು ಇವುಗಳಡಿಯಲ್ಲಿ ನೀರಿನ ಸಂಗ್ರಹಣೆ ಸಾಮರ್ಥ್ಯ ವಿವರಗಳು ಈ ಕೆಳಗಿನಂತಿವೆ.
<table>
<tr><th>ಕ್ರ. ಸಂ.</th><th>ಜಲಾಶಯ</th><th>ಸಂಗ್ರಹಣಾ ಸಾಮರ್ಥ್ಯ</th></tr>
<tr><td>1</td><td>ಕಾರಂಜಾ</td><td>7.691 TMC</td></tr>
<tr><td>2</td><td>ಚುಳಕಿನಾಲಾ</td><td>0.938 TMC</td></tr>
<tr><td>3</td><td>ಮೇಲ್ದಂಡೆ ಮುಲ್ಲಾಮಾರಿ ಯೋಜನೆ</td><td>0.749 TMC</td></tr>
</table>
</td></tr>
<tr><td>ಆ)</td><td>ಕಾರಂಜಾ ಹಾಗೂ ಇತರ ನೀರಾವರಿ ಯೋಜನೆಗಳ ವ್ಯಾಪ್ತಿಯಲ್ಲಿ ಇನ್ನೂ ಪೂರ್ಣಗೊಳ್ಳದೆ ಬಾಕಿ ಉಳಿದಿರುವ ಅಪೂರ್ಣ ಕಾಮಗಾರಿಗಳ (Incomplete Works) ಪ್ರಗತಿ ಯಾವ ಹಂತದಲ್ಲಿದೆ: ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ನಿಗಧಿಪಡಿಸಿರುವ ಕಾಲಮಿತಿ ಏನು:</td><td>ಬೀದರ್ ಜಿಲ್ಲೆ ವ್ಯಾಪ್ತಿಯಲ್ಲಿ ಕಾರಂಜಾ ಯೋಜನೆ (27,266 ಹೆಕ್ಟೇರ್), ಚುಳಕಿನಾಲಾ ಯೋಜನೆ (4,047 ಹೆಕ್ಟೇರ್), ಮೇಲ್ದಂಡೆ ಮುಲ್ಲಾಮಾರಿ ಯೋಜನೆ (3,279 ಹೆಕ್ಟೇರ್) ಗಳನ್ನು ಅನುಷ್ಠಾನಗೊಳಿಸಿ, ನಿಗದಿತ ಅಚ್ಚುಕಟ್ಟಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿರುತ್ತದೆ.<br><br>ಇದಲ್ಲದೆ, ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:<br><br>1) ಕಾರಂಜಾ ಜಲಾಶಯದ ಒಳಹರಿವಿನ ಕೊರತೆಯನ್ನು ಸರಿದೂಗಿಸಲು ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಮಾಣಿಕೇಶ್ವರ ಮತ್ತು ಹಾಲಹಳ್ಳಿ ಬ್ಯಾರೇಜ್‌ಗಳಿಂದ ನೀರನ್ನು ಒದಗಿಸಿ, ಕ್ರಮವಾಗಿ ಬಲದಂಡೆ ಕಾಲುವೆ ಕಿ.ಮೀ. 60 ಮತ್ತು 90ರಲ್ಲಿ ಅಚ್ಚುಕಟ್ಟನ್ನು ಸ್ಥಿರೀಕರಿಸುವ ಯೋಜನೆಯನ್ನು 2018ರಲ್ಲಿ ರೂ.126.85 ಕೋಟಿ ಮೊತ್ತದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆ. ಸದರಿ ಯೋಜನೆಗೆ ಇದೂವರೆಗೆ ರೂ.91.07 ಕೋಟಿ ವೆಚ್ಚವಾಗಿರುತ್ತದೆ.<br><br>2) ಬಾಲ್ಕಿ ತಾಲ್ಲೂಕಿನ 10,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ರೂ.762.00 ಕೋಟಿಗಳ ಮೊತ್ತದಲ್ಲಿ ಮೆಹಕರ್ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಮೊದಲನೇ ಹಂತದ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.<br><br>ಪ್ರಗತಿಯಲ್ಲಿರುವ ಯೋಜನೆಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಲು ಕ್ರಮ ವಹಿಸಲಾಗುತ್ತಿದೆ.</td></tr>
<tr><td>ಇ)</td><td>ಜಿಲ್ಲೆಯ ಪ್ರಮುಖ ನೀರಾವರಿ ಯೋಜನೆಗಳ ಕಾಲುವೆಗಳು ಹಾನಿಗೊಳಗಾಗಿರುವುದು ಹಾಗೂ ಹೂಳು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td>ಬಂದಿದೆ.</td></tr>
</table>

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಈ)</td><td>ಕಳೆದ ಮೂರು ವರ್ಷಗಳಲ್ಲಿ ಕಾಲುವೆ ದುರಸ್ತಿ ಮತ್ತು ನಿರ್ವಹಣೆಗಾಗಿ (Canal Maintenance) ಬಿಡುಗಡೆ ಮಾಡಲಾದ ಮತ್ತು ಬಳಸಲಾದ ಒಟ್ಟು ಅನುದಾನದ ಮೊತ್ತ ಎಷ್ಟು: (ವರ್ಷವಾರು ವಿವರ ನೀಡುವುದು)</td><td>ಕಳೆದ ಮೂರು ವರ್ಷಗಳಲ್ಲಿ ಕಾಲುವೆ ದುರಸ್ತಿ ಮತ್ತು ನಿರ್ವಹಣೆಗಾಗಿ (Canal Maintenance) ಬಿಡುಗಡೆ ಮಾಡಲಾದ ಅನುದಾನದ ವಿವರಗಳು ಈ ಕೆಳಗಿನಂತಿದೆ.
<table>
<tr><th rowspan="2">ಯೋಜನೆ</th><th colspan="3">ಅನುದಾನ (ರೂ.ಲಕ್ಷಗಳಲ್ಲಿ)</th></tr>
<tr><th>2023-24</th><th>2024-25</th><th>2025-26</th></tr>
<tr><td>ಕಾರಂಜಾ</td><td>54.82</td><td>84.38</td><td>15.60</td></tr>
<tr><td>ಚುಳಕಿನಾಲಾ</td><td>-</td><td>-</td><td>-</td></tr>
<tr><td>ಮೇಲ್ದಂಡೆ ಮುಲ್ಲಾಮಾರಿ ಯೋಜನೆ</td><td>20.26</td><td>28.95</td><td>34.43</td></tr>
</table></td></tr>
<tr><td>ಉ)</td><td>ಕಳೆದ ಐದು ವರ್ಷಗಳಲ್ಲಿ ವಿವಿಧ ನೀರಾವರಿ ಯೋಜನೆಗಳ ಅನುಷ್ಠಾನದಿಂದಾಗಿ ಜಿಲ್ಲೆಯಲ್ಲಿ ಹೊಸದಾಗಿ ಎಷ್ಟು ಹೆಕ್ಟೇರ್ ಕೃಷಿ ಭೂಮಿ ನೀರಾವರಿ ವ್ಯಾಪ್ತಿಗೆ ಸೇರಿದೆ: ಯೋಜಿತ ಗುರಿಯಷ್ಟು ನೀರಾವರಿ ಪ್ರದೇಶ ವಿಸ್ತರಣೆ ಸಾಧಿಸಲಾಗಿದೆಯೇ:</td><td>ಕಳೆದ 5 ವರ್ಷಗಳ ಅವಧಿಯಲ್ಲಿ ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿನ ಯೋಜನೆಗಳಡಿ ಹೊಸದಾಗಿ ನೀರಾವರಿ ಕ್ಷೇತ್ರ ಸೃಜಿಸಿರುವುದಿಲ್ಲ.<br><br>ಪ್ರಸ್ತುತ, ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ 12 ಗ್ರಾಮಗಳ 8,475 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲು ಮೇಹಕರ ಏತ ನೀರಾವರಿ ಯೋಜನೆಯನ್ನು ರೂ.762.00 ಕೋಟಿ ಮೊತ್ತದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಮೊದಲನೇ ಹಂತದ ಕಾಮಗಾರಿಯನ್ನು ಜುಲೈ 2025ರಲ್ಲಿ ಪ್ರಾರಂಭಿಸಲಾಗಿದೆ.</td></tr>
<tr><td>ಊ)</td><td>ಕಾಲುವೆಗಳ ಕೊನೆಯ ಭಾಗದ (Tail-end) ರೈತರಿಗೆ ಸಮರ್ಪಕವಾಗಿ ನೀರು ತಲುಪುತ್ತಿಲ್ಲಾ ಎಂಬ ದೂರುಗಳು ಸರ್ಕಾರದ ಗಮನಕ್ಕೆ ಬಂದಿವೆಯೇ: ನೀರು ವಿತರಣೆಯಲ್ಲಿನ ಅಡಚಣೆಗಳನ್ನು ನಿವಾರಿಸಲು ನೀರಾವರಿ ಬಳಕೆದಾರರ ಸಂಘಗಳ (Water Users Associations) ಬಲವರ್ಧನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?</td><td>ಬಂದಿದೆ.<br><br>ನೀರು ಬಳಕೆದಾರರ ಸಹಕಾರ ಸಂಘಗಳ (Water Users Associations) ಬಲವರ್ಧನೆಗೆ ಈ ಕೆಳಕಂಡಂತೆ ಕ್ರಮಕೈಗೊಳ್ಳಲಾಗಿದೆ:<br><br>1. ನೀರು ಬಳಕೆದಾರರ ಸಹಕಾರ ಸಂಘಗಳ ಬಲವರ್ಧನೆಗಾಗಿ ಪ್ರಾಧಿಕಾರದಿಂದ ಅರ್ಹ ಸಹಕಾರ ಸಂಘಗಳಿಗೆ ರೂ.1.00 ಲಕ್ಷ ವಾರ್ಷಿಕ ಕಾರ್ಯಾನುದಾನವನ್ನು ನೀಡಿ, ರೈತರಿಗೆ ಮರಿಕಾಲುವೆಗಳಲ್ಲಿ ತುಂಬಿರುವ ಹೂಳು, ಗಿಡಗಂಟಿ, ಕಾಲುವೆ ರಿಪೇರಿಯನ್ನು ನೀರು ಬಳಕೆದಾರರ ಸಹಕಾರ ಸಂಘಗಳ ಮೂಲಕ ಕೈಗೊಳ್ಳಲಾಗುತ್ತಿದೆ ಹಾಗೂ ವಿವಿಧ ರೀತಿಯ ಬೆಳೆಗಳನ್ನು ವೈಜ್ಞಾನಿಕವಾಗಿ ಬೆಳೆಯಲು ಹಾಗೂ ನೀರು ನಿರ್ವಹಣೆ ಕುರಿತು ತರಬೇತಿ ನೀಡಲಾಗುತ್ತಿದೆ.<br><br>2. ಪ್ರತಿ ಹೆಕ್ಟೇರಿಗೆ ರೂ.120.00 ರಂತೆ ರೈತರ ವಂತಿಕೆ ತುಂಬಿದ ಸಂಘಗಳಿಗೆ ಸರಕಾರದಿಂದ ರೂ.1080.00 ರಂತೆ ಒಟ್ಟು ರೂ.1200.00 ಪ್ರತಿ ಹೆಕ್ಟೇರಿಗೆ ಏಕಕಾಲಿಕ ನಿರ್ವಹಣಾ ಮಂಜೂರು ಮಾಡಿ, ಮೊತ್ತವನ್ನು ಭೂ ಅಭಿವೃದ್ಧಿ ಅಧಿಕಾರಿಗಳು ಮತ್ತು ಸಂಘದ ಕಾರ್ಯದರ್ಶಿ ಹೆಸರಿನಲ್ಲಿ ಮುದ್ದತ್ತು ಠೇವಣಿಯಲ್ಲಿ ತೊಡಗಿಸುತ್ತಿದ್ದು, ಸದರಿ ಠೇವಣಿಯಿಂದ ಉತ್ಪನ್ನವಾಗುವ ಬಡ್ಡಿಯನ್ನು ಪ್ರತಿ 03 ತಿಂಗಳಿಗೊಮ್ಮೆ ಸಂಘದ ಆಡಳಿತಾತ್ಮಕ ವೆಚ್ಚಗಳಿಗೆ ಭರಿಸಲು ಅವಕಾಶವಿರುತ್ತದೆ.</td></tr>
</table>

**ಜಸಂಇ 60 ಎಂಎಲ್ಎ 2026**

**(ಡಿ.ಕೆ.ಶಿವಕುಮಾರ್)**
**ಉಪಮುಖ್ಯಮಂತ್ರಿ**